# ತಾಳೆ ಎಣ್ಣೆಯೆ? ತಾಳಿ ಸ್ವಾಮಿ!



**ರಬ್ಬರ್, ವೆನಿಲ್ಲಾ. ಅಡಕೆಯ ಲಾಭದಾಸೆಗೆ ಬಲಿಬಿದ್ದು ಗದ್ದೆಗಳನ್ನು ತೋಟಗಳನ್ನಾಗಿ ಮಾಡಿರುವ ರೈತರಿಗೆ ಮಾರುಕಟ್ಟೆಯಲ್ಲಿ ಸಂಚಕಾರ ಬಂದಿರುವುದು ಕಣ್ಣೆದುರಿಗೇ ಇದೆ. ಇನ್ನೀಗ ತಾಳೆ ಎಣ್ಣೆಯ ಸರದಿ ಆರಂಭವಾದಂತಿದೆ. ಆದರೆ ತಾಳೆ ಗಿಡಗಳನ್ನು ಹಾಕುವ ಮುನ್ನ ಸ್ವಲ್ಪ ಆಲೋಚಿಸಿ.**

**■ ಡಾ. ಮನೋಜ ಗೋಡಬೋಲೆ**

ಕೇರಳ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೆಲವರ್ಷಗಳ ಹಿಂದೆ ಅಪಾರ ಜನಪ್ರಿಯವಾಗಿದ್ದ ರಬ್ಬರ್ ಕೃಷಿಯು ಇಂದು ಬೆಲೆಯಿಲ್ಲದೆ ನೆಲಕಚ್ಚುವ ಹಂತವನ್ನು ತಲುಪುತ್ತಿದೆ.

ರಬ್ಬರ್ ಬೆಳೆಗಾರರು ಯೋಚನೆ ಮಾಡಿ: ರಬ್ಬರನ್ನು ಬೆಳೆಯಲು ಶುರು ಮಾಡಿದಾಗ ಎಷ್ಟು ವಿಧದ ವೈವಿಧ್ಯಮಯ ಗಿಡಮರಗಳಿಗೆ ಕೊಡಲಿ ಹಾಕಿದ್ದೀರಿ? ಈಗ ಬೆಲೆ ಕುಸಿತದಿಂದ ರಬ್ಬರ್ ಕೃಷಿಯಿಂದ ವಿಮುಖರಾದರೂ, ಕಳೆದುಕೊಂಡ ಅಪಾರ ನೈಸರ್ಗಿಕ ಸಂಪತ್ತು ಪುನಃ ಸೃಷ್ಟಿಯಾಗುವುದು ಸಾಧ್ಯವೇ? ಒಂದೊಮ್ಮೆ ಅದೇ ಜಾಗದಲ್ಲಿ ಗಿಡಮರಗಳ ನಾಶವನ್ನು ಮಾಡದೇ ರಬ್ಬರಿನ ಬದಲು ಕಾಳುಮೆಣಸಿನ ಬಳ್ಳಿಗಳನ್ನು ಕಾಡಿನ ಗಿಡಗಳಿಗೆ ಹಬ್ಬಿಸಿದ್ದರೆ ಅಪಾರವಾದ ಆದಾಯ ನಿಮ್ಮದಾಗುತ್ತಿತ್ತಲ್ಲವೇ?

ಈ ಪ್ರಕ್ರಿಯೆಯಲ್ಲಿ ಮೆಣಸಿಗೆ ತಗುಲುವ ಕೊಳೆರೋಗ ಕೂಡ ಅಷ್ಟಾಗಿ ಬಾಧಿಸುತ್ತಿರಲಿಲ್ಲ. ಯಾಕೆಂದರೆ ಹಲವಾರು ವೈವಿಧ್ಯಮಯವಾದ ಸಸ್ಯಗಳ ನಡುವೆ ಬೆಳೆವ ಗಿಡಗಳಿಗೆ ರೋಗಗಳ ಬಾಧೆ ಅಡಿಕೆ ತೋಟಗಳಲ್ಲಿ ಬೆಳೆಸುವ ಬಳ್ಳಿಗಳಿಗಿಂತ ಬಹಳ ಕಡಿಮೆ. ರೋಗವು ಬಳ್ಳಿಗಳಿಗೆ ತಗುಲಿದರೂ ಕೂಡ ಸುಲಭವಾಗಿ ಹರಡಲಾರವು. ಹಾಗಾಗಿ ಹೆಚ್ಚಿನ ಆರೈಕೆಯಿಲ್ಲದೆಯೂ ಹುಲುಸಾಗಿ ಬೆಳೆಯುತ್ತವೆ. ಫಸಲು ಕೈಗೆ ಸಿಕ್ಕಮೇಲೆ ಕಾಳುಮೆಣಸಿಗೆ ಬೆಲೆ ಸಿಗದಿದ್ದರೂ ಕೂಡ ಅದನ್ನು ಹಲವಾರು ವರ್ಷಗಳ ಕಾಲ ಕೆಡದಂತೆ ಆರಾಮವಾಗಿ ಶೇಖರಿಸಿಡಬಹುದು. ಬೆಲೆಯೇರಿದಾಗ ಮಾರಬಹುದು.

ಎಷ್ಟೋ ಕಡೆಗಳಲ್ಲಿ ಬೆಳೆದು ವರ್ಷವೂ ಫಸಲು ಕೊಡುತ್ತಿದ್ದ ಗೇರು, ನೇರಳೆ, ಜಂಬೆ, ಮಾವು, ಹಲಸು, ವಾಟೆ, ಪುನರ್ಪುಳಿ, ಧೂಪ, ಚಕ್ಕೆ, ಅಳಲೆ ಹೀಗೆ ಹಲವಾರು ವೈವಿಧ್ಯಗಳನ್ನು ಕೇವಲ ರಬ್ಬರ್ ಕೃಷಿಗೋಸ್ಕರ ನಾಶಮಾಡಲಾಗಿಲ್ಲವೇ? ರಬ್ಬರ್ ಕೃಷಿಗೆ ರೈತರ ತಲೆಯಲ್ಲಿದ್ದ ಮತ್ತೊಂದು ಕಾರಣವೇನೆಂದರೆ ಅದಕ್ಕೆ ಕಡಿಮೆ ಮಾನವ ಶ್ರಮ ಸಾಕೆಂಬುದು. ಆದರೆ ಆ ಕಡಿಮೆ ಮಾನವ ಶ್ರಮಕ್ಕೆ ಕೊಡುವ ಹಣವೇನು ಕಡಿಮೆಯೇ? ಇವೆಲ್ಲಾ ವಿಚಾರಗಳು ರಬ್ಬರ್ ಕೃಷಿಗೆ ತೊಡಗುವ ಮುನ್ನ ಯಾರೂ ಯೋಚಿಸಿರಲಿಕ್ಕಿಲ್ಲ.

ಇನ್ನು ಕೆಲವು ಬೆಳೆಗಳು ಮಾನವನ ದುರಾಸೆಯಿಂದ, ಸ್ವಯಂಕೃತ ಅಪರಾಧದಿಂದ ನಷ್ಟಕ್ಕೆ ಒಳಗಾಗುತ್ತವೆ. ಉದಾಹರಣೆಗೆ ವೆನಿಲ್ಲಾವನ್ನು ನೋಡೋಣ. ದಶಕದ ಹಿಂದೆ ಕ್ಲುಪ್ತ ಸಮಯದಲ್ಲಿ ಅಪಾರ ಜನಪ್ರಿಯತೆಯನ್ನು ಗಳಿಸಿ ತದನಂತರ ಉತ್ಪನ್ನದ ಗುಣಮಟ್ಟದಲ್ಲಿ ಲೋಪಗಳು ಕಂಡುಬಂದು ಅಷ್ಟೇ ಬೇಗ ಜನಮಾನಸದಿಂದ ದೂರವಾಗಿದ್ದಕ್ಕೆ ರೈತರು, ದಲ್ಲಾಳಿಗಳು, ವ್ಯಾಪಾರಸ್ಥರ ದುರಾಸೆಗಳೂ ಕಾರಣವೆನ್ನುವುದು ಗುಟ್ಟೇನಲ್ಲ. ತೂಕ ಹೆಚ್ಚಿಸಲು ಹಸಿರಾದ ವೆನಿಲ್ಲಾ ಕೋಡುಗಳಲ್ಲಿ ಸಿರಿಂಜಿನ ಮೂಲಕ ನೀರನ್ನು ಸೇರಿಸಿದ್ದು, ಒಣ ಬೀನ್ಸಿನಲ್ಲಿ ತೂಕವನ್ನು ಹೆಚ್ಚಿಸಲು ತಂತಿಗಳನ್ನು ತುರುಕಿದ್ದು– ಹೀಗೆ ಹಲವಾರು ದುಷ್ಕೃತ್ಯಗಳು ವರದಿಯಾಗಿದ್ದವು. ಅಂದರೆ ದುಡ್ಡಿನ ದುರಾಸೆಯಿಂದ ಚಿನ್ನದ ಮೊಟ್ಟೆಯಿಡುವ ಕೋಳಿಯ ಕತ್ತನ್ನು ಕೊಯ್ದ ಕತೆಯಂತೆ ವೆನಿಲ್ಲಾವನ್ನೂ ನಾಶ ಮಾಡಲಾಯಿತು. ಈಗ ಅಲಂಕಾರಕ್ಕಾಗಿ ಮನೆಯ ಅಂಗಳದಲ್ಲಿ ನೆಡಲು ಬೇಕೆಂದರೂ ವೆನಿಲ್ಲಾದ ಬಳ್ಳಿಯು ಸುಲಭವಾಗಿ ಸಿಕ್ಕುವುದಿಲ್ಲ.

ವರ್ಷದ ಕೆಳಗೆ ಲಕ್ಷದ ಗಡಿಯನ್ನು ದಾಟಿದ ಅಡಿಕೆಯನ್ನು ಬೆಳೆಯಲು ಈಗೆಷ್ಟು ರೈತರು ತಮ್ಮ ಫಲವತ್ತಾದ ಗದ್ದೆಗಳನ್ನು ತೋಟವಾಗಿ ಪರಿವರ್ತಿಸಿದ್ದಾರೋ ಏನೋ? ಅಡಿಕೆ ನಿಷೇಧವೆಂಬ ತೂಗುಕತ್ತಿ ಸದಾ ಬೆಳೆಗಾರರ ಮೇಲೆ ತೂಗುತ್ತಿದ್ದರೂ ಹಣದ ವ್ಯಾಮೋಹ ಎಲ್ಲರನ್ನು ಸೆಳೆಯುವುದು ಸಹಜವೇ. ಹೀಗೆ ಪರಿವರ್ತಿಸಲ್ಪಟ್ಟ ಗದ್ದೆಯಿಂದ ಭೂಮಿಯಲ್ಲಿ ನೀರಿನ ಇಂಗುವಿಕೆಯೂ ಕಡಿಮೆಯಾಗಿ ಮುಂದೊಂದು ದಿನ ಆ ಪ್ರಾಂತ್ಯದಲ್ಲಿ ನೀರಿನ ಅಭಾವ ಉಂಟಾಗಿ ಟ್ಯಾಂಕರಿನವರಿಗೆ ಒಳ್ಳೆಯ ಲಾಭವಾದೀತು! ಆಗ ಅನ್ನಕ್ಕೇ ಚಿನ್ನದ ರೇಟೂ ಬಂದೀತು. ಆಗ ತೋಟಗಳನ್ನು ಕಡಿದು ಪುನಃ ಗದ್ದೆಗಳನ್ನಾಗಿ